ಸೋಮವಾರಪೇಟೆ ತಾಲ್ಲೂಕು ಆಲೂರು ಸಿದ್ದಾಪುರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ವೈದ್ಯಕೀಯ ಉಪಕರಣ ಸರಬರಾಜು

1897 (2363) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕು ಆಲೂರು ಸಿದ್ದಾಪುರ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ವಂತ ಕಟ್ಟಡ ಹೊಂದಿದ್ದು ಈ ಆಸ್ಪತ್ರೆಗೆ ನೀಡಬೇಕಾದ ಮಂಚ, ಹಾಸಿಗೆ, ರೆಫ್ರಿಜರೇಟರ್ ಅಪರೇಷನ್ ಚಿಕಿತ್ಸೆ ಉಪಕರಣಗಳು ಎಷ್ಟು ಸರಬರಾಜು ಮಾಡಬೇಕಾಗಿತ್ತು;

ಆ) ಎಷ್ಟು ಸರಬರಾಜು ಮಾಡಲಾಗಿದೆ? ಉಳಿದುದನ್ನು ಯಾವಾಗ ಸರಬರಾಜು ಮಾಡಲಾಗುವುದು;

ಇ) ಈ ಆರೋಗ್ಯ ಕೇಂದ್ರಕ್ಕೆ ವೈದ್ಯಕೀಯ ಉಪಕರಣ ಔಷಧಿ ಶಸ್ತ್ರ ಚಿಕಿತ್ಸೆ ಉಪಕರಣಗಳಿಗೆ ಖರ್ಚು ಮಾಡಿರುವ ಮೊತ್ತ (ಕಳೆದ ಮೂರು ವರ್ಷದಲ್ಲಿ ಎಷ್ಟು?)

ಈ) ಈ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಅಂಬ್ಯುಲೆನ್ಸ್ ಅಥವಾ ಜೀಪನ್ನು ನೀಡಲಾಗುವುದೇ?

ಡಾ: ಎ.ಬಿ.ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಪ್ರಾಥಮಿಕ ಆರೋಗ್ಯ ಕೇಂದ್ರ ಆಲೂರು ಸಿದ್ದಾಪುರಕ್ಕೆ ಈ ಪ್ರಮಾಣದಲ್ಲಿ ಮಂಚ, ಹಾಸಿಗೆ, ರೆಫ್ರಿಜರೇಟರ್ ಹಾಗೂ ಅಪರೇಷನ್ ಚಿಕಿತ್ಸೆ ಉಪಕರಣಗಳನ್ನು ಸರಬರಾಜು ಮಾಡಬೇಕಾಗಿರುತ್ತದೆ.

1)	ಮಂಚ	- 6
2)	ಹಾಸಿಗೆ	- 6
3)	ರೆಫ್ರಿಜರೇಟ್	- 1
4)	ಅಪರೇಷನ್ ಚಿಕಿತ್ಸೆಯ ಉಪಕರಣಗಳು	- ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸಂಬಂಧಿಸಿದಂತೆ,ಅವಶ್ಯವಿರುವ ಎಲ್ಲಾ ಉಪಕರಣಗಳು

ಆ) ಪ್ರಾಥಮಿಕ ಆರೋಗ್ಯ ಕೇಂದ್ರ ಆಲೂರು ಸಿದ್ದಾಪುರಕ್ಕೆ ಈಗಾಗಲೇ ಈ ಪ್ರಮಾಣದಲ್ಲಿ ಹಾಸಿಗೆ, ಮಂಚ, ರೆಫ್ರಿಜರೇಟ್, ಅಪರೇಷನ್ ಚಿಕಿತ್ಸಾ ಉಪಕರಣಗಳನ್ನು ಸರಬರಾಜು ಮಾಡಲಾಗಿದೆ.

1	ಹಾಸಿಗೆ - ರಕ್ಸಿನ್‌ಕಾಯಿರೆಬೆಡ್	- 7
2	ಹತ್ತಿ ಹಾಸಿಗೆ	- 6

3	ಮಂಚ	- 10
4	ರಫ್ರಿಜರೇಟರ್	- 2
5	ಅಪರೇಷನ್ ಚಿಕಿತ್ಸಾ ಉಪಕರಣಗಳು:-	
	ಸೀರಚ್ ಹೋಲ್ಡರ್	1
	ನೀಡಲ್	1
	ಸೂಚರ್ ನೀಡಲ್ (ರೌಂಡ್)	2 ಪ್ಯಾಕ್
	ಬಾಗಿದ ಸೂಚರ್ ನೀಡಲ್	- ಪ್ಯಾಕ್
	ನೀಳ ಸೂಚರ್ ನೀಡಲ್ಸ್	3 ಪ್ರಾಕಟ್
	ಸ್ಟೀಲ್ ಟ್ರೇ	- 1
	ಸೀಸರ್ಸ್	5 ಸಂಖ್ಯೆ
	ಎನಾಮಿಲ್ ಟ್ರೇ	- 1
	ಕಿಡ್ನಿ ಟ್ರೇ	- 1
	ವಾಶ್ ಬೇಸಿನ್ ಸ್ಟಾಂಡ್	1
	ವಾಶ್ ಬೇಸಿನ್	- 1
	ಆಟೋಕ್ಲೇವ್	- 2

ಪ್ರಾಥಮಿಕ ಆರೋಗ್ಯ ಕೇಂದ್ರ ಆಲೂರು ಸಿದ್ದಾಪುರಕ್ಕೆ ಹೊಸದಾಗಿ ನಿರ್ಮಾಣ ಮಾಡಿರುವ ಕಟ್ಟಡವನ್ನು ಡಿಸೆಂಬರ್ 99ರ ಮಾಹೆಯಲ್ಲಿ ಇಲಾಖೆಯ ವಶಕ್ಕೆ ತೆಗೆದುಕೊಂಡಿರುವುದರಿಂದ, 2000-2001ನೇ ಆರ್ಥಿಕ ವರ್ಷದಲ್ಲಿ ಉಳಿದ ಅವಶ್ಯವಿರುವ ಸಾಧನ ಸಲಕರಣೆಗಳನ್ನು ಪೂರೈಸಲು ಕ್ರಮ ತೆಗೆದುಕೊಳ್ಳಲಾಗುವುದು.

ಇ) ಪ್ರಾಥಮಿಕ ಆರೋಗ್ಯ ಕೇಂದ್ರ ಆಲೂರು ಸಿದ್ದಾಪುರಕ್ಕೆ ಕಳೆದ ಮೂರು ವರ್ಷಗಳಿಂದ ವೈದ್ಯಕೀಯ ಉಪಕರಣ ಔಷಧಿ ಶಸ್ತ್ರ ಚಿಕಿತ್ಸಾ ಉಪಕರಣಗಳಿಗೆ ಕೆಳಗೆ ಕಾಣಿಸಿದಂತೆ ಮೊತ್ತವನ್ನು ಖರ್ಚು ಮಾಡಲಾಗಿದೆ.

ವೈದ್ಯಕೀಯ ಉಪಕರಣಗಳಿಗೆ - ರೂ.10100-00

ಔಷಧಿಗಳಿಗೆ - ರೂ.78936-00

ಶಸ್ತ್ರ ಚಿಕಿತ್ಸಾ ಉಪಕರಣಗಳಿಗೆ - ರೂ.7154-00

ಪೀಠೋಪಕರಣಗಳಿಗಾಗಿ -ರೂ.26872-00

ಈ) ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವಾ ನಿರ್ದೇಶನಾಲಯದಿಂದ ಈ ಕೇಂದ್ರವನ್ನು ಒಳಗೊಂಡಂತೆ ಹಂತಹಂತವಾಗಿ ವಾಹನಗಳನ್ನು ಒದಗಿಸುತ್ತಿದೆ.